INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -4, July-August, 2023,
PageNo,09-14
Peer -Reviewed, Refereed Journal

# ಕರ್ನಾಟಕದಲ್ಲಿ ಬೌದ್ಧಧರ್ಮ ಮತ್ತು ಸಾಹಿತ್ಯ

ಡಾ.ಮಹದೇವಪ್ರಸಾದ್ ಎನ್.ಎಸ್.[1]

ಬೌದ್ಧಧರ್ಮ ಪ್ರಪಂಚದ ಅತ್ಯಂತ ಪುರಾತನ ಧರ್ಮಗಳಲ್ಲಿ ಒಂದು. ಆ ಧರ್ಮದ ತತ್ತ್ವ – ಸತ್ವಗಳು ಜನ ಸಾಮಾನ್ಯರ ಪರವಾದವುಗಳು. ಆದ್ದರಿಂದಲೇ ಅದಕ್ಕೆ ಜಾಗತಿಕ ಮನ್ನಣೆ ಇದೆ. ಈ ಎಲ್ಲಾ ಕಾರಣಗಳಿಂದ ಅದೊಂದು ಪರಿಪೂರ್ಣ ಧರ್ಮ. ಜಗತ್ಪ್ರಸಿದ್ಧ ಇತಿಹಾಸಕಾರನಾಗಿದ್ದ ಅರ್ನಾಲ್ಡ್ ಟಾಯನ್ ಬಿ ಯು ತನ್ನ 'ಏಕಜಗತ್ತು ಮತ್ತು ಭಾರತ 'ಎಂಬ ಉಪನ್ಯಾಸದಲ್ಲಿ ಹೇಳಿದ ಮಾತು ತುಂಬ ಮಹತ್ವಪೂರ್ಣವಾದುದು. "ಜಗತ್ತಿನ ಬೌದ್ಧಿಕ ವಿಕಾಸ ಮೊದಲು ಎಲ್ಲಿ ಪ್ರವರ್ಧಮಾನಕ್ಕೆ ಬಂದಿತ್ತೆಂದು ನನ್ನ ಕೇಳಿದರೆ ನಾನು ಭಾರತವನ್ನು ತೋರಿಸುತ್ತೇನೆ". ಈ ವಿಚಾರ ಹೇಳಬೇಕಾದರೆ ಅವರ ಮುಂದೆ ಇದ್ದದ್ದು ಬೌದ್ಧಧರ್ಮದ ಜೀವಪರ ಕಾಳಜಿ, ಜನಹಿತಕಾರಿ ಕಾರ್ಯ ಎಂಬುದನ್ನು ಮಾತ್ರ ಮರೆಯಬಾರದು. ಈ ಇತಿಹಾಸಕಾರರ ಮಾತಿನಲ್ಲಿ ಬುದ್ಧನ ತತ್ವಗಳ ಮೇರು ದಾರ್ಶನಿಕತೆ ಅಡಗಿದೆ.

## ಕರ್ನಾಟಕದ ಚರಿತ್ರೆಯಲ್ಲಿ ಬೌದ್ಧಧರ್ಮ:

ಕರ್ನಾಟಕದಲ್ಲಿ ಅಶೋಕನ ಆಗಮನದ ಮೂಲಕ ಬೌದ್ಧಧರ್ಮ ಪಾದಾರ್ಪಣೆ ಮಾಡಿತ್ತೆಂದು ಹೇಳಬಹುದು. ಆ ಸಂದರ್ಭದಲ್ಲಿ ಪ್ರಚುರವಾಗಿದ್ದು ಹೀನಾಯಾನ ಪಂಥ. ಈ ಕುರಿತಾದ ಮೊದಲ ಚಾರಿತ್ರಿಕ ದಾಖಲೆಯಂದರೆ ಕ್ರಿ.ಶ. ೩೩೮ ರ ತಾಮ್ರಪಟದಲ್ಲಿ ರಾಜನೊಬ್ಬನನ್ನು ಪ್ರಾಣಿಗಳ ಮೇಲೆ ಕರುಣೆ

[1]. ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು

ಇಲ್ಲಿರುವುದರಿಂದ, ಬೋದಿಸತ್ವನಿಗೆ ಸಮಾನನೆಂದು ಹೊಗಳಿದೆಯಲ್ಲದೆ ಅವನನ್ನು ನಿಷ್ಕಾರಣ ವತ್ಸಲ 'ಬುದ್ಧ' ಎಂದು ಕೀರ್ತಿಸಿದೆ. ಇದರಿಂದ ಸ್ಪಷ್ಟವಾಗುವ ಅಂಶ ತುಂಬ ಸ್ಪಷ್ಟವಾಗಿಯೇ ಇದೆ. ಅದೆಂದರೆ ಕ್ರಿ.ಶ. ಆರಂಭದಲ್ಲಿ ಕನ್ನಡ ನೆಲೆದಲ್ಲಾಗಲೇ ಆ ವಾದ ಬೇರನ್ನು ಬಿಟ್ಟಿತ್ತಲ್ಲದೆ, ರಾಜರು ಕೂಡ ಬೌದ್ಧಧರ್ಮವನ್ನು ಆಧರಿಸಿದ ಮಹತ್ವಪೂರ್ಣವಾದ ವಿಷಯ ಚರಿತ್ರೆಗಳಿಂದ ತಿಳಿದುಬರುತ್ತದೆ.

ಬಳ್ಳಿಗಾವೆಯಲ್ಲಿ ಬೌದ್ಧದೇವತೆಯಾದ 'ತಾರಾಭಗವತಿ' ದೇವಾಲಯ ಇದ್ದಿತ್ತೆಂಬ ವಿಷಯವನ್ನು ವಿದ್ವಾಂಸರು ಈಗಾಗಲೇ ಗುರ್ತಿಸಿದ್ದಾರೆ. ಶ್ರೀ ಹಯವದನರಾಯರು, ಡಾ.ಪಿ.ಬಿ.ದೇಸಾಯಿಯವರು ಬಳ್ಳಿಗಾವೆಯಲ್ಲಿ ಪ್ರಚಲಿತದಲ್ಲಿದ್ದದ್ದು ಮಹಾಯಾನ ಪಂಥವಲ್ಲ, ಅದು ತಾಂತ್ರಿಕ ಬೌದ್ಧಧರ್ಮ ಅರ್ಥಾತ್ ವಜ್ರಯಾನ ಎಂದು ಊಹಿಸಿದ್ದಾರೆ. ಡಂಬಳ ಶಾಸನವು 'ಬೌದ್ಧವಿಹಾರ" ವೊಂದನ್ನು ಉಲ್ಲೇಖಿಸುತ್ತದೆ, ಅಲ್ಲದೆ ಅಲ್ಲಿ ಮುಕ್ಕಾದವೊಂದು ತಾರಾಭಗವತಿಯ ಶಿಲ್ಪವು ದೊರಕಿದೆ, ಎಂಬುದು ಗಮನಾರ್ಹ ಅಂಶ. ಕರ್ನಾಟಕದಲ್ಲಿ ಬೌದ್ಧಧರ್ಮದ ಅಸ್ತಿತ್ವವನ್ನು ಕುರಿತು ಹೇಳುವ ಚಾರಿತ್ರಿಕ ದಾಖಲೆ ಎಂದರೆ ೧೬ ನೇ ಶತಮಾನವೊಂದು ಬೌದ್ಧವಸಹಾಪುರಿ ಎಂಬ ಗ್ರಾಮವನ್ನು ವಿದ್ವಾಂಸರು'ಕಲವತಿ' ಎಂದು ನಿರ್ದೇಸಿದ್ದಾರೆ. ಹೀಗೆ ಚಾರಿತ್ರಿಕವಾಗಿ ಬೌದ್ಧದರ್ಮ ಅಸ್ತಿತ್ವ ಕನ್ನಡ ನೆಲೆಯಲ್ಲಿ ಆಗಿರುವುದು ಕಂಡುಬರುತ್ತದೆ. ಅಲ್ಲದೆ ಪ್ರಸ್ತುತವು ಉತ್ತರ ಕನ್ನಡ ಜಿಲ್ಲೆಯ 'ಮುಂಡಗೋಡ' ಹಾಗೂ ಮೈಸೂರು ಜಿಲ್ಲೆಯ 'ಬೈಲುಕುಪ್ಪೆ'ಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಬೌದ್ಧ ಬಿಕ್ಷುಗಳು ನೆಲೆ ಕಂಡುಕೊಂಡಿದ್ದಾರೆ. ಬೌದ್ಧರೆ ಭಾಷೆಗೆ ಆದಿಕವಿಗಳು, ಕನ್ನಡ ನೆಲದಲ್ಲಿ ಬೌದ್ಧಮತವು ಪ್ರಾಬಲ್ಯಕ್ಕೆ ಬಂದ ಕಾಲದಿಂದ ಅಂದರೆ ಸುಮಾರು ಕ್ರಿ.ಶ.ಆದಿಭಾಗದಿಂದಲೂ ಬೌದ್ಧಮತವು ಕನ್ನಡ ಭಾಷೆಯಲ್ಲಿ ಗ್ರಂಥ ರಚನೆಯಾಗುತ್ತಿದ್ದಿರಬೇಕು, ಪ್ರಾಚೀನ ಕಾಲದಲ್ಲಿ ಅದರಲ್ಲಿಯಾ ಬೌದ್ಧಮತ ಪ್ರಾಬಲ್ಯ ನಾಶವಾದಂದಿನಿಂದಲೂ ಜೈನರು, ವೈದಿಕ ಮತಾನುಸಾರಿಗಳಾದ ಕವಿಗಳು ಗ್ರಂಥ ರಚನೆ ಮಾಡಿದರು. ಬೌದ್ಧಮತದ ನಾಶದೊಂದಿಗೆ ಬೌದ್ಧಗ್ರಂಥ

ನಾಶವು ಆಯಿತು ಎಂದಿದ್ದಾರೆ. ಈ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ ಎಂ.ಚಿದಾನಂದಮೂರ್ತಿಯವರು, ಟಿ.ಎಸ್. ವೆಂಕಣ್ಣಯ್ಯನವರು ಈ ಊಹೆಗಳು ನಿಜವಾಗಿರುವ ಸಾಧ್ಯತೆ ಬಹುಕಡಿಮೆ ಎಂದಿದ್ದಾರೆ. ಏಕೆಂದರೆ ಅವುಗಳನ್ನು ಸಾಧಿಸಲು ಇನ್ನು ಹೆಚ್ಚು ಖಚಿತವಾದ ಆಧಾರಗಳು ಬೇಕು. ಕನ್ನಡ ನಾಡಿನಲ್ಲಿ ಬೌದ್ಧ ಧರ್ಮವಿತ್ತು ಎಂಬುವ  ಎಷ್ಟು ಖಚಿತವೋ ಅಷ್ಟು ಬೌದ್ಧರು ಕನ್ನಡದಲ್ಲಿ ಗ್ರಂಥ ರಚನೆಯನ್ನು ಮಾಡಿದರು, ಎಂದು ಹೇಳಲು ಸದ್ಯದಲ್ಲಿ ಆಧಾರಗಳಿಲ್ಲ ಎಂದಿದ್ದಾರೆ ಎಂ. ಚಿದಾನಂದಮೂರ್ತಿಯವರು. ಇವರ ಈ ಅಭಿಪ್ರಾಯವನ್ನು ಪ್ರೊ. ಡಾಎನ್.ಎಸ್.ತಾರಾನಾಥ ಅವರು ಅನುಮೋದಿಸಿದ್ದಾರೆ. ಕ್ರಿ.ಶ. ೩ ನೇ ಶತಮಾನದಿಂದ ಕ್ರಿ.ಶ. ೧೬ನೇ ಶತಮಾನದವರೆಗೆ ಕನ್ನಡ ನಾಡಿನಲ್ಲಿ ನೆಲೆಕಂಡುಕೊಂಡಿದ್ದ ಈ ಧರ್ಮ ಜೈನ ,ವೈಷ್ಣವ, ವೀರಶೈವ ಮತಗಳ ಪ್ರಾಬಲ್ಯದಿಂದ ತುಳಿತಕೊಳಗಾಗಿರುವುದು ನಿಜ, ಹಾಗಾಗಿ ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತಹ ಕಾರ್ಯಗಳಲ್ಲೂ ಬೌದ್ಧಧರ್ಮದ ಕೊಡುಗೆಯನ್ನು ನಿರೀಕ್ಷಿಸುವಂತಹುದೆ ಎಂಬ ಮಾತು ಬುದ್ಧನನ್ನು ಕುರಿತು ಅಧ್ಯಯನ ಮಾಡಲು ಆಸಕ್ತಿ ಮೂಡಿಸುತ್ತದೆ.

**ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬುದ್ಧದಮ್ಮ:**

"ಸಾಹಿತ್ಯವೆನ್ನುವುದು ಪ್ರತಿಯೊರ್ವನ ಹಕ್ಕು. ಅದನ್ನು ಬೌದ್ಧರೆ ಬರೆಯಬೇಕು, ಜೈನರೆ ಬರೆಯಬೇಕು ಎಂಬ ನಿಯಮವೇನು ಇಲ್ಲ. ಸಾಹಿತ್ಯ ಸೃಷ್ಟಿಕರ್ತನ ಅಭಿವ್ಯಕ್ತಿಯ ಮಾಧ್ಯಮ; ಬೌದ್ಧಧರ್ಮವನ್ನು ಕುರಿತು ಇತರರು ಬರೆದುದು ಕೂಡ ಬೌದ್ಧಸಾಹಿತ್ಯವೇ ಆಗುತ್ತದೆ.

ಆ ನಿಟ್ಟಿನಲ್ಲಿ ಹೊಸಗನ್ನಡದಲ್ಲಿ ಬುದ್ಧನ ಕುರಿತ ಸಾಹಿತ್ಯ ತುಂಬ ವಿಫುಲವಾಗಿಯೆ ಇರುವುದು ಕಂಡುಬರುತ್ತದೆ. ನವೋದಯ ಕಾಲಘಟ್ಟದಲ್ಲಿ ಬರುವ ಪ್ರಮುಖ ಕವಿಗಳು ,ಲೇಖಕರು ಆದ ಗೋವಿಂದ ಪೈ, ಕುವೆಂಪು, ದ.ರಾ. ಬೇಂದ್ರೆ, ಶಿವರಾಮಕಾರಂತ ಇನ್ನೂ ಮುಂತಾದವರ ಸಾಹಿತ್ಯ ಕೃತಿಗಳಲ್ಲಿ ಸಂಬುದ್ಧನ ಆಕೃತಿ ಅಕ್ಷರರೂಪವನ್ನು ಪಡೆದಿರುವುದು ತಿಳಿದುಬರುತ್ತದೆ.

ಕುವೆಂಪು ಅವರ 'ಬುದ್ಧದೇವ' ಕವಿತೆಯಲ್ಲಿ ಗೌತಮಬುದ್ಧನ ಬುದ್ಧಿ, ಸ್ಪೂರ್ತಿಗಳು ಮಾನವನ ಅಂತರಂಗದಲ್ಲಿರುವ ಅರ್ಥವಿಲ್ಲದ ಶುಷ್ಕಭಾವಗಳು ಹೇಗೆ ಸುಟ್ಟು ಹೋಗುತ್ತವೆ ಎಂಬುದನ್ನು ಹೇಳುತ್ತ ಮಾನವರೆಲ್ಲರಿಗೂ ಸನ್ಮತಿಯ ನಾಗರೀಕತೆ ಬೇಕೆಂಬುದನ್ನು ಪ್ರತಿಪಾದಿಸಿದ್ದಾರೆ.

ಆ ಕವಿತೆಯ ಒಕ್ಕಣೆ ಈ ಕೆಳಗಿನಂತಿದೆ.

"ಹೇ ಬುದ್ಧದೇವ, ನಿನ್ನತುಲ ಬುದ್ದಿ ಸ್ಪೂರ್ತಿ
ಮಾನವನ ಮುರ್ಖತೆಯ ದಹಿಸುವ ಮಹಾಜ್ವಾಲೆ
ಅರ್ಥವಿಲ್ಲದ ಕರ್ಮತತಿಯ ಮರುಭೂಮಿಯಲ್ಲಿ
ಶುಷ್ಕ ಆಚಾರ ಸೈಕತದಲ್ಲಿ ನಡೆಗೆಟ್ಟು
ನಿರ್ಮಲ ವಿಚಾರವಾದ ಲಯವಾಗುತ್ತಿರೆ, ಕಟ್ಟು
ಕಟ್ಟಳೆಯ ಲೋಹ ಶೃಂಖಲೆಯ ಯಮ ಸಂಗದಲ್ಲಿ
ಕುಬ್ಜವಾಗುತ್ತಲಿರುವ ಧರ್ಮದ ಮಹೋನ್ನತಿಯು
ವೈರಾಗ್ಯ ವರ್ಷವನ್ನು ಕರೆದು ,ಜನರಲಿ ಮತಿಯು
ಶೃತಿಯ ಬಂಡೆಯ ಬಿರಿದು ಮೂಡುವಂತೆಸಗಿರುವೆ
ಹೇ ಪುಣ್ಯಮತಿ ಮೂರ್ತಿ. ಮತ ಮತಿಹೀನತೆಯು
ಸಾಕೆಮಗೆ: ಬೇಕು ಸನ್ಮತಿಯ ನಾಗರೀಕತೆಯು"

(ಬುದ್ಧ ಚಿಂತನೆ,ಪುಟ೨೭)

ಮಾನವತೆಗೆ ಪೂರಕವಾದ ವಿವರಗಳನ್ನು ಹೇಳುತ್ತಾ ಹೀಗೆ ಮತದ ಮತಿಹೀನತೆ ದೂರವಾಗಿ ಸನ್ಮತಿಯ ಸನ್ಮಾರ್ಗವನ್ನು ಪಡೆಯಲು ಬುದ್ಧನ ಉಪದೇಶಗಳ ಅಗತ್ಯತೆ ಕುರಿತು ಕವಿ ಶ್ರುತಪಡಿಸಿದ್ದಾರೆ.

ವರಕವಿ ಬೇಂದ್ರೆಯವರು ತಮ್ಮ "ಬುದ್ಧ 'ಕವಿತೆಯಲ್ಲಿ

ಬುದ್ಧ, ಬುದ್ಧ, ಬುದ್ಧ,

ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ

ಶಬ್ದನಾದ ಧ್ವನಿಯ ಸದ್ದ ಮೀರಿದ್ದ

ಇಲ್ಲ ಎಂಬುದ ಕೊನೆಗೆ ಆತ್ಮ ಶುದ್ಧ

ಇದ್ದರೆಲು ನಿಲ್ಲದಿದ್ದರೇನೆನಗೆದ್ದ (ವಿನಯ, ಪುಟ ೪೨)

ವರಕವಿ ದ.ರಾ.ಬೇಂದ್ರೆ ಅವರು ಇಲ್ಲಿ ಬುದ್ಧನ ಅಂತರಂಗವನ್ನು ಸರಿಯಾಗಿ ಗ್ರಹಿಸಿದ್ದಾರೆ. ಆ ಮೂಲಕ ಜನ ಸಾಮಾನ್ಯರಿಗೂ ಅವನ ಬೋಧಿಸತ್ವವನ್ನು ತಲುಪಿಸಲು ಪ್ರಯತ್ನಿಸಿದ್ದಾರೆ.

ಕೆ.ಎಸ್. ನರಸಿಂಹಸ್ವಾಮಿಯವರು ಬುದ್ಧಸ್ಮಿತ ,ಚೆನ್ನವೀರಕಣವಿಯವರು ಬುದ್ಧೋದಯ, ಎಂ.ಡಿ.ಒಕ್ಕುಂದ ಅವರ 'ಮಗು ಮಲಗಿರಲು ಎದೆಯ ಮೇಲೆ" ಈ ಮುಂತಾದ ಕವನಗಳಲ್ಲಿ ಸಂಬುದ್ಧನ ಜೀವನ ತತ್ವಗಳ ಜೀವಕಾರುಣ್ಯದ ಹೊನಲನ್ನೆ ಹರಿಸಿದ್ದಾರೆ.

ಎಸ್.ವಿ. ಪರಮೇಶ್ವರ ಭಟ್, ಎಲ್.ಬಸವರಾಜು ಅವರು ಅನುವಾದ ಸಾಹಿತ್ಯದಲ್ಲೂ ಬುದ್ಧನನ್ನು ಕನ್ನಡ ಸಾಹಿತ್ಯಕ್ಕೆ ಭಟ್ಟಿಇಳಿಸಿದ್ದಾರೆ. ಪ್ರಭುಶಂಕರ ,ಕಾಶಿವಿಶ್ವನಾಥಶೆಟ್ಟಿ ಅವರು ಕಾವ್ಯ, ನಾಟಕ ಸಾಹಿತ್ಯದ ಮೂಲಕ ಬುದ್ಧನ ತತ್ವ ಸಿದ್ಧಾಂತಗಳನ್ನು ಮನೆ ಮನೆಗಳಿಗೆ ತಲುಪಿಸಲು ಯಶಸ್ವಿಯಾಗಿದ್ದಾರೆ. ಹೀಗೆ ಬುದ್ಧ ಸಾಹಿತ್ಯವು ಕನ್ನಡದ ನೆಲದಲ್ಲಿ ಹರಳುಗಟ್ಟಿದೆ.

**ಪರಾಮರ್ಶನ ಗ್ರಂಥಗಳು;**

೧. ಡಿ.ಎ. ಶಂಕರ್.– ಕಾರುಣ್ಯಮೂರ್ತಿ ಭಗವಾನ್ ಬುದ್ಧ, ಕಾವ್ಯಲಯ ಪ್ರಕಾಶನ,ಮೈಸೂರು, ೨೦೦೯

೨. ಜಯಕೃಷ್ಣ ಟಿ.ಎಸ್. – ಸಿದ್ಧಾರ್ಥ, ವಾಸನ್ ಪಬ್ಲಿಕೇಷನ್, ಬೆಂಗಳೂರು, ೨೦೦೧

೩. ಪ್ರಧಾನ್ ಗುರುದತ್ತ. – ಕುವೆಂಪು. ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೨೦೦೧

೪. ಕೇಶವ ಶರ್ಮ (ಸಂ) – ಕುವೆಂಪು ಸಾಹಿತ್ಯ, ಸಂಕ್ರಮಣ ಪ್ರಕಾಶನ, ಬೆಂಗಳೂರು.

೫. ತ.ಸು.ಶಾಮರಾಯ – ಕನ್ನಡ ನಾಟಕ, ಗೀತಾ ಬುಕ್ ಹೌಸ್, ಮೈಸೂರು, ೧೯೬೨

೬. ಎ.ಕೃಷ್ಣಮೂರ್ತಿ ಹನೂರು–ಬಿ.ಪುಟ್ಟಸ್ವಾಮಯ್ಯ, ನವಕರ್ನಾಟಕ ಪ್ರಕಾಶನ,ಬೆಂಗಳೂರು, ೨೦೦೨